VIJAYAKUMAR KANNUR
Digitally signed by VIJAYAKUMAR KANNUR
Date: 2026.02.09 10:39:19 +0530



**ಪ್ರಧಾನ ಹಿರಿಯ ದಿವಾಣಿ ನ್ಯಾಯಧೀಶರು ಹಾಗೂ ಜೆ.ಎಂ.ಎಫ್.ಸಿ. ಇವರ ನ್ಯಾಯಾಲಯ, ಮುಧೋಳ**

**ಸಾಕ್ಷಿಗೆ ಇಂದು ದಿನಾಂಕ 07.02.2026 ರಂದು ಪ್ರಮಾಣ ವಚನ ಬೋಧಿಸಲಾಯಿತು.**

**ಮುಂದುವರೆದ ಪಾಟೀ ಸವಾಲುಃ ಆರೋಪಿ ಪರ ಶ್ರೀ ಎಸ್ ಎಸ್ ಜೆ ವಕೀಲರಿಂದ :**

ನಾನು ಮೆಕ್ಯಾನಿಲ್ ಇಂಜಿನಿಯರಿಂಗ ಪದವಿಧರನಾಗಿರುವೆನು. ನಾನು ರೂ. 20 ಲಕ್ಷ ಹಣವನ್ನು ಉಳಿತಾಯ ಮಾಡಿ ಇಟ್ಟಿದ್ದು, ಆ ಹಣವನ್ನು ಆರೋಪಿಗೆ ನೀಡಿರುವೆನು. ನಾನು ಆದಾಯ ತೆರಿಗೆ ಪಾವತಿ ಮಾಡಿರುವುದಿಲ್ಲ. ನಾನು ಪಾರ್ಟ ಟೈಮ ಕೆಲಸ ಮಾಡಿದ್ದು, ಅದರಿಂದ ಬಂದ ಆದಾಯವಿರುವುದು. ರೂ. 2 ಲಕ್ಷಕ್ಕಿಂತ ಹೆಚ್ಚಿನ ಹಣ ನೀಡಬೇಕಾದರೆ ನಗದು ರೂಪದಲ್ಲಿ ನೀಡಲು ಬರುವುದಿಲ್ಲ ಅದು ಬ್ಯಾಂಕ್ ನ ಮೂಲಕ ನೀಡಬೇಕು ಎಂದು ಆದಾಯ ತೆರಿಗೆಯ ನಿಯಮ ಇರುವ ಬಗ್ಗೆ ನನಗೆ ಮಾಹಿತಿ ಇರುವುದು. ರೂ. 20 ಲಕ್ಷ ಹಣ ಆದಾಯ ನೀಡಿದ ಬಗ್ಗೆ ನಾನು ಆದಾಯ ತೆರಿಗೆ ಇಲಾಖೆಯಿಂದ declaration ಪಡೆದಿರುವುದಿಲ್ಲ. ನಾನು IDFC ಬ್ಯಾಂಕ ನಲ್ಲಿ ಸಾಲ ಮಾಡಿರುವೆನು. ಈ ಬ್ಯಾಂಕಿನಿಂದ ಸಾಲ ಪಡೆದುಕೊಂಡು ಆರೋಪಿಗೆ ಹಣ ನೀಡಿದ ಬಗ್ಗೆ ದಾಖಲೆಗಳನ್ನು ನಾನು ಹಾಜರು ಪಡಿಸಿರುವುದಿಲ್ಲ. ನನಗೆ ಪ್ರತಿ ತಿಂಗಳು ರೂ. 60 ಸಾವಿರ ಬರುವುದು. ಇದಕ್ಕೆ ಸಂಬಂಧಪಟ್ಟಂತೆ ಯಾವುದೇ ದಾಖಲೆಗಳನ್ನು ಹಾಜರು ಪಡಿಸಿರುವುದಿಲ್ಲ. ನನ್ನ ಸಂಬಳಕ್ಕೆ ಸಂಬಂಧಪಟ್ಟಂತೆ ನಾನು ಆದಾಯ ತೆರಿಗೆ ಪಾವತಿದಾರನಾಗಿರುವುದಿಲ್ಲ.

2. ನಿಪಿ 6 ರ ದಾಖಲಾತಿಯನ್ನು ಮಂಜುನಾಥ ಎಂಬುವವರು ತಯಾರು ಮಾಡಿಕೊಟ್ಟಿರುವರು. ಅವರು ಟೈಪಿಂಗ್ ಮಾಡುವರು. ಅವರು ದಸ್ತು ಬರಹಗಾರರಾಗಿರುವುದಿಲ್ಲ ಎಂದರೆ ಸರಿಯಲ್ಲ. ಇವರು ದಸ್ತು ಬರಹಗಾರರ ಸಹಾಯಕರಾಗಿರುವರು ಅಂತ ಸೂಚಿಸುವುದು ಸರಿಯಲ್ಲ. ಆರೋಪಿಗೆ ಈ ಹಣ ನೀಡುವ ಸಮಯದಲ್ಲಿ ಆರೋಪಿ, ನಾನು ಮತ್ತು ವೈಶಾಲಿ ತಲಾಟಿ ಎಂಬುವವರು ಹಾಜರಿದ್ದೇವು. ಈ

ಸಂಗತಿ ನಾನು ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. ಈ ದೂರಿನಲ್ಲಿ ಹೇಳಿರುವಂತೆ ಆರೋಪಿಗೆ ನನ್ನ ಕಡೆಯಿಂದ ರೂ. 20 ಲಕ್ಷ ಹಣ ಕೈಗಡ ರೂಪದಲ್ಲಿ ಸಾಲವಾಗಿ ಪಡೆದುಕೊಳ್ಳುವಂತಹ ಯಾವುದೇ ಸಂದರ್ಭ ಬಂದಿರುವುದಿಲ್ಲ ಎಂದರೆ ಸರಿಯಲ್ಲ. ನಿಪಿ 6 ರ ದಾಖಲೆಯ ಪ್ರಕಾರ ಹಣವನ್ನು ಮರಳಿ ನೀಡುವಂತೆ ಹೇಳಿ ಆರೋಪಿಗೆ ಯಾವುದೇ ಕಾನೂನು ಬದ್ದವಾದ ನೋಟಿಸನ್ನು ನಾನು ನೀಡಿರುವುದಿಲ್ಲ. ಈ ಆರೋಪಿಗೆ ರೂ. 20 ಲಕ್ಷ ಹಣ ನೀಡಿದ ಬಗ್ಗೆ ನಿಪಿ 6 ರ ದಾಖಲಾತಿಯನ್ನು ಹೊರತು ಪಡಿಸಿ ಬೇರೆ ದಾಖಲೆಗಳು ನನ್ನ ಹತ್ತಿರ ಇರುವುದಿಲ್ಲ.

3. ಆರೋಪಿಯು ನನ್ನ ತಾಯಿಯ 2 ನೇ ಗಂಡನಾಗಿರುವನು ಎಂದರೆ ಸರಿ. ಆರೋಪಿಯ ಖುಲ್ಲಾ ಚೆಕ್‌ನ್ನು ನಾನು ತೆಗೆದುಕೊಂಡು ಬಂದು ಅದನ್ನು ದುರುಪಯೋಗಪಡಿಸಿಕೊಂಡಿದ್ದೇನೆ ಎಂದರೆ ಸರಿಯಲ್ಲ. ನಿಪಿ 1 ಎ ಸಹಿ ಆರೋಪಿಯದಾಗಿರುವುದಿಲ್ಲ ಎಂದರೆ ಸರಿಯಲ್ಲ. ನಿಪಿ 6 ಎ ಮತ್ತು 6 ಬಿ ಸಹಿಗಳು ಸಹ ಆರೋಪಿಯದಾಗಿರುವುದಿಲ್ಲ ಎಂದರೆ ಸರಿಯಲ್ಲ. ನಿಪಿ 1 ರ ಚೆಕ್ ನ್ನು ಆರೋಪಿ ನನಗೆ ನೀಡಿರುವುದಿಲ್ಲ, ನಿಪಿ 1 ರ ಚೆಕ್ ನ್ನು ನಾನೇ ಸೃಷ್ಟಿ ಮಾಡಿಕೊಂಡಿದ್ದೇನೆ ಎಂದರೆ ಸರಿಯಲ್ಲ. ರೂ. 20 ಲಕ್ಷ ಹಣ ಆರೋಪಿಗೆ ನೀಡುವಂತಹ ಆರ್ಥಿಕ ಸಾಮರ್ಥ್ಯ ನನಗೆ ಇರುವುದಿಲ್ಲ ಎಂದರೆ ಸರಿಯಲ್ಲ. ರೂ. 20 ಲಕ್ಷ ಆದಾಯ ನಾನು ಹೊಂದಿದ ಬಗ್ಗೆ ನಾನು ಯಾವುದೇ ದಾಖಲೆಗಳನ್ನು ಹಾಜರು ಪಡಿಸಿರುವುದಿಲ್ಲ ಎಂದರೆ ಸರಿ. ನನ್ನ ತಾಯಿಯ ಕಡೆಯಿಂದ ನಿಪಿ 1 ರ ಖುಲ್ಲಾ ಚೆಕ್ ನ್ನು ತೆಗೆದುಕೊಂಡು ಅದನ್ನು ದುರುಪಯೋಗಪಡಿಸಿಕೊಂಡು ಈ ಸುಳ್ಳು ದೂರು ದಾಖಲು ಮಾಡಿ ನಾನು ಸುಳ್ಳು ಸಾಕ್ಷಿ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ.

**ಮರುವಿಚಾರಣೆಃ** ಇರುವುದಿಲ್ಲ

(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದಂತೆ ಸಾಕ್ಷಿಯ ಹೇಳಿಕೆಯಂತೆ ಬೆರಳಚ್ಚು ಮಾಡಿಸಲಾಯಿತು. )

ಓ . ಹೇ. ಕೆ . ಸರಿ ಅದೆ .

ಸಾಕ್ಷಿಯ ಸಹಿ

ಪ್ರಧಾನ ಹಿರಿಯ ದಿವಾಣಿ ನ್ಯಾಯಾಧೀಶರು
ಜೆ.ಎಂ.ಎಫ್.ಸಿ., ಮುಧೋಳ